

ಗಣಿಯೊಳಗೆ ಇಳಿಯಲು ಇರುವ ಮೆಟ್ಟಿಲುಗಳು

ಹಲವು ಚಿತ್ತಾರಗಳು ಬಿಡಿಸಿಕೊಳ್ಳುತ್ತ ಹೋಗುತ್ತವೆ. ಉಗುರಿನಲ್ಲಿ ಆ ಉಪ್ಪನ್ನು ಎರೆದು ಬಾಯಲ್ಲಿ ಹಾಕಿಕೊಂಡರೆ ಈ ಎಲ್ಲ ಉತ್ಸಾಹ ಮತ್ತು ಕೌತುಕಗಳ ನಡುವೆ ಅದೊಂದು ದಿವ್ಯ ರುಚಿಯೆನಿಸಿಬಿಡುತ್ತದೆ.

## ತಂಪು ತಂಪು ಕೂಲ್

ನಾವು ಈ ಜಾಗಕ್ಕೆ ಭೇಟಿಕೊಟ್ಟ ದಿನ ಹೊರಗಿನ ತಾಪಮಾನ 35 ಡಿಗ್ರಿಯಾದರೆ ಗಣಿಯ ಒಳಗಿನ ತಾಪಮಾನ ಕೇವಲ ಹದಿನಾರಿತ್ತು. ಈ ತಂಪಾದ ವಾತಾವರಣದಲ್ಲಿ ಅಲ್ಲಿನ ಕಲೆಗಾರ, ವಾಸ್ತುಶಿಲ್ಪಿ, ಗಣಿಗಾರರು ಹಲವು ದೃಶ್ಯಗಳನ್ನು ಉಪ್ಪಿನ ಶಿಲ್ಪಗಳ ಮೂಲಕ ಹೇಳುತ್ತಾರೆ. ಕೆಲವೆಡೆ ಈ ಗಣಿ ಬಹಳಷ್ಟು ಅಗಲವಾಗುತ್ತದೆ. ಅಲ್ಲಿ ನಾಲ್ಕು ವಿಶಾಲವಾದ ಪ್ರಾರ್ಥನಾ ಮಂದಿರಗಳನ್ನು ನಿರ್ಮಿಸಲಾಗಿದೆ. ನೂರಾರು ಅಡಿಗಳ ಕೆಳಗೆ ಉಪ್ಪಿನ ಕೆರೆಗಳಿವೆ. ಈ ಕೆರೆಗಳ ತಳದಲ್ಲಿ ಉಪ್ಪು ಗಡ್ಡೆಗಟ್ಟಿ ನಿಂತಿರುವುದನ್ನು ನೋಡಬಹುದು. ನಾಲ್ಕು ದೊಡ್ಡ ಸಭಾಂಗಣದಲ್ಲಿ ಹಲವು ಹತ್ತು ಮೂರ್ತಿಗಳಿವೆ. ಅದಕ್ಕಿರುವ ತಾರಸಿಯಿಂದ ಇಳಿಬಿದ್ದ ಉಪ್ಪಿನ ಹರಳುಗಳಿಂದ ಮಾಡಿದ ತೂಗುದೀಪಗಳನ್ನು ನೋಡಬಹುದು. ಇಲ್ಲಿ ಮದುವೆಗಳು ಕೂಡ ನಡೆಯುತ್ತವೆ. ಅದಕ್ಕೆಂದೇ ಒಂದು ಭಾರೀ ಮರದ ಅಟ್ಟಣಿಗೆಯನ್ನೇ ನಿರ್ಮಿಸಿದ್ದಾರೆ.

ಈ ಗಣಿ ರಾಜಮನೆತನದ ಆಳ್ವಿಕೆಯಲ್ಲಿದ್ದ ಕಾಲದಲ್ಲಿ, 13331370ರ ನಡುವೆ ಆಳಿದ ಪೋಲೆಂಡಿನ ಪ್ರಸಿದ್ಧ ರಾಜ ಮೂರನೇ ಕಾಸಿಮಸ್ ಎಂಬಾತ ಉಪ್ಪಿನ ಗಣಿಯ ಸ್ಥಿತಿಯಲ್ಲಿ ಬಹಳ ಸುಧಾರಣೆಗಳನ್ನು ಮಾಡಿದ. ವೇಲಿಜ್ಕಾ ಗಣಿಗೆ ವಿಶೇಷ ಮಾನ್ಯತೆಗಳನ್ನು ನೀಡಿ, ಉಪ್ಪಿನ ಗಣಿಯನ್ನು ಚಿನ್ನದ ಗಣಿಯಂತೆಯೇ ಪೋಷಿಸಿದ. ಮೊಟ್ಟಮೊದಲ ಬಾರಿಗೆ ಉಪ್ಪಿನ ಗಣಿಯ ಕಾನೂನುಗಳನ್ನು ಜಾರಿಗೊಳಿಸಿದ. ಇದರ ನೆಲದಲ್ಲೇ ಆಸ್ಪತ್ರೆಯನ್ನು ಕಟ್ಟಿಸಿದ. ಇದಕ್ಕಾಗಿ ಗಣಿಯ ಜನರು ಈತನನ್ನು ಬಹಳ ನೆನೆಯುತ್ತಾರೆ.

## ಉಪ್ಪಿನ ಗಣಿಯ ಮೂಲ

ಭೂಮಿ ರೂಪುಗೊಂಡ ಮಿಯೋಸಿನ್ ಎನ್ನುವ ಕಾಲಘಟ್ಟದಲ್ಲಿ, ಬಹಳಷ್ಟು ಭೌಗೋಳಿಕ ಬದಲಾವಣೆಗಳಾದವು. ಭೂಮಿಯ ಪದರಗಳು ಒಂದಕ್ಕೊಂದು ಡಿಕ್ಕಿ ಹೊಡೆದು ಕರಪಥಿಯನ್ಸ್ ಎನ್ನುವ ಪರ್ವತ ಶ್ರೇಣಿಗಳನ್ನು ನಿರ್ಮಿಸಿದವು. ಗ್ರೀಕರ ದೇವನಾದ ಟೈಟಾನ್ ಒಕಿಯನೋಸ್‌ನ ಮಡದಿ ಥೆಟಿಸ್‌ನ ಹೆಸರಿನಲ್ಲಿದ್ದ ಸಮುದ್ರ ಇದರಿಂದ ಭಾಗವಾಗುತ್ತದೆ. ಇದರ ಉತ್ತರ



ಭಾಗದ ಸಮುದ್ರ ಹಿನ್ನೀರಾಗಿ ನಿಂತಿತು. ಸುಮಾರು ಇಪ್ಪತ್ತು ಸಹಸ್ರ ವರ್ಷಗಳ ಕಾಲ ಈ ಪ್ರದೇಶದಲ್ಲಿ ಉಪ್ಪು ಹೆಪ್ಪುಗಟ್ಟಿ ಹಿಂಗಿ, ಭೂಗತವಾಯ್ತೆಂದೂ ನಂತರ ಇದರಿಂದಾಗಿ ಆ ಜಾಗದಲ್ಲಿ 15 ಕಿ.ಮೀ. ಅಗಲ ಮತ್ತು 330 ಮೀ ಆಳದವರೆಗೆ ಉಪ್ಪು ಶೇಖರವಾಯ್ತೆಂದು ಅಂದಾಜು ಮಾಡಲಾಗಿತ್ತು. ಇಲ್ಲಿಂದ ಬುಗ್ಗೆಯಾದ ನೀರೇ ಉಪ್ಪಿನ ನೀರಾಗಿ ಮೇಲಕ್ಕೆ ಹರಿಯಿತೆಂಬ ಊಹೆಯಿದೆ.

ವೇಲಿಜ್ಕಾ ಉಪ್ಪಿನ ಗಣಿಯಲ್ಲಿ 14 ಮಿಲಿಯನ್ ವರ್ಷ ಹಳೆಯದಾದ ಉಪ್ಪಿನ ಹರಳುಗಳು ದೊರೆತಿವೆ. ಇಲ್ಲಿನ ಉಪ್ಪು, ಸೋಡಿಯಂ ಕ್ಲೋರೈಡ್ ಕಲ್ಲುಪ್ಪಿನ ಹರಳುಗಳ ರೂಪದಲ್ಲಿಯೂ, ಪೊಟ್ಯಾಶಿಯಂಮ್ಯಾಗ್ನೀಸಿಯಂನ ಸಾಲ್ಟ್ ರೂಪದಲ್ಲಿಯೂ ದೊರೆತಿವೆ. ಈ ಕಾರಣ ಹಲವು ಮನಮೋಹಕ ವರ್ಣದ ಗಡ್ಡೆಗಳನ್ನು ನಾವು ಇಲ್ಲಿನ ಉಪ್ಪಿನ ಪ್ರದರ್ಶನಾಲಯದಲ್ಲಿ ನೋಡಬಹುದು.

## ಕಾಲದ ನಡೆಗೆ ಕೈಗನ್ನಡಿ

ವೇಲಿಜ್ಕಾ ಗಣಿ, ಕಾಲ ಬದಲಾದಂತೆಲ್ಲ ಕೈಗಾರಿಕೋದ್ಯಮದಲ್ಲಿ ಮನುಷ್ಯ ಅಳವಡಿಸಿಕೊಂಡ ಹೊಸ ಬದಲಾವಣೆಗಳನ್ನು ನಮ್ಮ ಮುಂದೆ ಪ್ರದರ್ಶನಕ್ಕಿಡುತ್ತದೆ.

ಮೊದಲು ಮನುಷ್ಯ ಮಾತ್ರನ ಸಹಾಯದಿಂದ ಶುರುವಾದ ಈ ಗಣಿ, ನಂತರ ಕುದುರೆಗಳ ಸಹಾಯದಿಂದ ನಡೆಯಿತು. ಅದಕ್ಕಾಗಿ ಕುದುರೆಗಳನ್ನು ಗಣಿಯೊಳಕ್ಕೆ ಸಾಗಿಸಿ ಅವುಗಳ ಮೂಲಕ ಹಂಗೇರಿ ದೇಶದಿಂದ ತಂದು ಅಳವಡಿಸಿದ ರಾಟೆಚಕ್ರದ ಯಂತ್ರದ ಮೂಲಕ ಕೆಲಸ ಮುಂದುವರೆಯಿತು. ನಂತರ ಸ್ಯಾಕ್ಸನ್ನರ ಯಾಂತ್ರಿಕ ರಾಟೆ ಚಕ್ರಗಳನ್ನು ಬಳಸಲಾಯ್ತು. ಎರಡನೇ ಯುದ್ಧದ ಸಮಯದಲ್ಲಿ ಜರ್ಮನ್ನರು ಈ ಗಣಿಯನ್ನು ವಶಪಡಿಸಿಕೊಂಡು ಉಪ್ಪಿನ ಬದಲು